ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 19/11/2019

ದುಷ್ಕರ್ಮಿಯಿಂದ ಇರಿತ | ತೀವ್ರ ನಿಗಾ ಘಟಕದಲ್ಲಿ 48 ಗಂಟೆ | ಚಿಕಿತ್ಸೆಗೆ ಸ್ಪಂದನೆ

# ಅಪಾಯದಿಂದ ಶಾಸಕ ತನ್ವೀರ್ ಪಾರು

■ **ವಿಕ ಸುದ್ದಿಲೋಕ** ಮೈಸೂರು

ಮಚ್ಚಿನೇಟಿನಿಂದ ತೀವ್ರವಾಗಿ ಗಾಯಗೊಂಡಿರುವ ಶಾಸಕ ತನ್ವೀರ್ ಸೇಠ್ ನಗರದ ಕೊಲಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಅಪಾಯದಿಂದ ಪಾರಾಗಿದ್ದಾರೆ. ಆದರೂ, 24ರಿಂದ 48 ಗಂಟೆಗಳ ಕಾಲ ತೀವ್ರ ನಿಗಾವಹಿಸಲಾಗುತ್ತಿದೆ.

ಕುತ್ತಿಗೆ ಭಾಗದ ರಕ್ತನಾಳಗಳಿಗೆ ಏಟು ಬಿದ್ದ ಹಿನ್ನೆಲೆಯಲ್ಲಿ ಅವರ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ಆರಂಭದಲ್ಲಿ ತಿಳಿಸಿದ್ದರು. ಇದರಿಂದ ತೀವ್ರ ಆತಂಕ ತಲೆದೋರಿತ್ತು. ಆದರೆ ಕುತ್ತಿಗೆ ಸ್ಕ್ಯಾನಿಂಗ್ ಮಾಡಿದಾಗ ರಕ್ತನಾಳಗಳಿಗೆ ಯಾವುದೇ ತೊಂದರೆಯಾಗಿಲ್ಲ. ಇದರಿಂದ ಸಂಭವನೀಯ ಅಪಾಯ ದೂರವಾಗಿದೆ. ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ವೆಂಟಿಲೇಟರ್ ತೆಗೆದಿದ್ದು ಉಸಿರಾಟ ಸಹಜ ಸ್ಥಿತಿಗೆ ಬಂದಿದೆ ಎಂದು ಆಸ್ಪತ್ರೆಯ ಮುಖ್ಯ ಅಧೀಕ್ಷಕ ಡಾ. ಉಪೇಂದ್ರ ಶೆಣೈ ಹೇಳಿದ್ದಾರೆ.

**ಏಕಾಏಕಿ ದಾಳಿ:** ಬನ್ನಿಮಂಟಪದ ಮೈದಾನದಲ್ಲಿ ನಡೆದ ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ತನ್ವೀರ್ ಸೇಠ್, ಗಾಯನ ಕೇಳುತ್ತಾ ಆಸೀನರಾಗಿದ್ದಾಗ ಏಕಾಏಕಿ ದಾಳಿ ನಡೆಸಿದ ಗೌಸಿಯಾ ನಗರದ ಫರಾನ್, ಮಚ್ಚಿನಿಂದ ತನ್ವೀರ್ ಸೇಠ್ ಅವರ ಕುತ್ತಿಗೆ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿ ಸಿಕ್ಕಿ ಬಿದ್ದಿದ್ದ. ತಕ್ಷಣ ತನ್ವೀರ್ ಸೇಠ್ ಅವರನ್ನು ಮೈಸೂರು- ಬೆಂಗಳೂರು ರಸ್ತೆಯಲ್ಲಿರುವ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಡ್ಯಾಗರ್ ಇರಿತದಿಂದ ತನ್ವೀರ್ ಸೇಠ್ ಅವರಿಗೆ ಕತ್ತಿನ ಭಾಗದಲ್ಲಿ ಆಳವಾದ ಗಾಯವಾಗಿದ್ದು, ತೀವ್ರವಾಗಿ ರಕ್ತಸ್ರಾವವಾಗಿತ್ತು.



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಸಕ ತನ್ವೀರ್ ಸೇಠ್.

ಶಾಸಕ ತನ್ವೀರ್ ಸೇಠ್ ಕೊಲೆ ಯತ್ನದ ಹಿಂದೆ ಕೆಲವು ಸಂಘಟನೆಯ ಕೈವಾಡ ಇರಬಹುದು. ಅದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಎಲ್ಲಾ ಹಂತಗಳಲ್ಲಿಯೂ ತನಿಖೆ ನಡೆಸಲಾಗುತ್ತಿದೆ.

- **ಕೆ. ಟಿ. ಬಾಲಕೃಷ್ಣ** ಮೈಸೂರು ನಗರ ಪೊಲೀಸ್ ಆಯುಕ್ತ

ತನ್ವೀರ್ ಸೇಠ್ ಕೊಲೆ ಯತ್ನ ನಡೆಸಿದವ ಎಸ್‌ಡಿಪಿಐ ಸದಸ್ಯ. ಇದರ ಹಿಂದೆ ಎಸ್‌ಡಿಪಿಐ ಸಂಘಟನೆ ಇದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಇದು ಒಬ್ಬ ಮಾಡಿರುವ ಕೆಲಸವಲ್ಲ. ಈ ಬಗ್ಗೆ ತನಿಖೆಯಾಗಲಿ.

- **ಸಿದ್ದರಾಮಯ್ಯ** ಮಾಜಿ ಸಿಎಂ

## ತನ್ವೀರ್‌ಗೆ ಜೀವಬೆದರಿಕೆ ಇತ್ತು !

''ನರಸಿಂಹರಾಜ ಕ್ಷೇತ್ರದಲ್ಲಿ ಬೇರು ಬಿಡುತ್ತಿರುವ ಕೆಲವು ಮೂಲಭೂತವಾದಿ ಸಂಘಟನೆಗಳಿಂದ ತನ್ವೀರ್‌ಗೆ ಪ್ರಾಣಭಯವಿತ್ತು. ಈ ಹಿನ್ನೆಲೆಯಲ್ಲಿ ಈ ಹಿಂದಿನ ಪೊಲೀಸ್ ಆಯುಕ್ತರು ಹೆಚ್ಚುವರಿ ರಕ್ಷಣೆ ಪಡೆದುಕೊಳ್ಳುವಂತೆ ತನ್ವೀರ್‌ಗೆ ಸೂಚಿಸಿದ್ದರು, ಸಾರ್ವಜನಿಕರಿಗೆ ಕಿರಿಕಿರಿಯಾಗುತ್ತದೆ ಎಂದು ಅವರು ನಿರಾಕರಿಸಿದ್ದರು'' ಎಂದು ತನ್ವೀರ್ ಸೇಠ್ ಅವರ ಆಪ್ತ, ಕಾಂಗ್ರೆಸ್ ಮುಖಂಡ ಜಿ. ಎನ್. ಮಂಜುನಾಥ್ ವಿಜಯ ಕರ್ನಾಟಕಕ್ಕೆ ತಿಳಿಸಿದರು.

# ಕೃತ್ಯದ ಹಿಂದೆ ಮೂಲಭೂತವಾದಿ ಸಂಘಟನೆ?

■ **ಹರೀಶ್ ಎಲ್. ತಲಕಾಡು** ಮೈಸೂರು

ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಕೊಲೆ ಯತ್ನದ ಹಿಂದೆ ಮೂಲಭೂತವಾದಿ ಸಂಘಟನೆ ಕೈವಾಡವಿರಬಹುದು ಎಂಬ ಶಂಕೆ ಬಲವಾಗಿದೆ.



ಆರೋಪಿ ಫರಾನ್

ವಿಐಪಿಯೊಬ್ಬರನ್ನು ಮುಗಿಸಿದರೆ ಕುಖ್ಯಾತಿ ಸಂಪಾದಿಸಬಹುದು ಹಾಗೂ ಶಾಸಕ ತನ್ವೀರ್ ತನಗೆ ನೌಕರಿ ನೀಡಿರಲಿಲ್ಲ ಎಂಬ ಹಿನ್ನೆಲೆಯಲ್ಲಿ ಆರೋಪಿ ಫರಾನ್ ಈ ಕೃತ್ಯ ನಡೆಸಿದ್ದಾನೆ ಎಂದು ಪೊಲೀಸರು ಬಹಿರಂಗವಾಗಿ ಹೇಳುತ್ತಿದ್ದಾರೆಯಾದರೂ, ಅವರ ತನಿಖೆಯ ಜಾಡು ಮಾತ್ರ ಮೂಲಭೂತವಾದಿ ಸಂಘಟನೆಯತ್ತಲೇ ನೆಟ್ಟಿದೆ.

ತನ್ವೀರ್‌ಗೆ ಮೂಲಭೂತವಾದಿ ಸಂಘಟನೆಯಿಂದ ಪ್ರಾಣಭಯವಿತ್ತು ಎಂಬ ಕಾಂಗ್ರೆಸ್ ಮುಖಂಡರ ಬಹಿರಂಗ ಹೇಳಿಕೆ ನೀಡಿದ್ದರೆ, ಮಾಜಿ ಸಿಎಂ ಸಿದ್ದರಾಮಯ್ಯ ಕೂಡ ಅದೇ ರೀತಿಯ ಅನುಮಾನ ವ್ಯಕ್ತಪಡಿಸಿರುವುದು ಗಮನಾರ್ಹ. ಫರಾನ್ ಅಲ್ಪಸಂಖ್ಯಾತ ಸಮುದಾಯದ ನಡುವೆ ಪ್ರಭಾವಿಯಾಗಿರುವ ಎಸ್‌ಡಿಪಿಐ ಜತೆಗೂ ಗುರುತಿಸಿಕೊಂಡಿದ್ದ. ಇತ್ತೀಚೆಗೆ ಕಾಂಗ್ರೆಸ್ ಮತ್ತು ಜೆಡಿಎಸ್ ವಲಯದಲ್ಲೂ ಕಾಣಿಸಿಕೊಂಡಿದ್ದ. ಆದರೆ ಆತನ ಕೈ ಬಾಯಿ ಶುದ್ಧವಿಲ್ಲ ಎಂದ ಎಲ್ಲ ಪಕ್ಷಗಳೂ ಆತನನ್ನು ದೂರವಿಟ್ಟಿದ್ದವು.

**ತಂಡ ಕಟ್ಟಿಕೊಂಡು ಬಂದಿದ್ದ :** ಭಾನುವಾರ ರಾತ್ರಿ ಬನ್ನಿಮಂಟಪದಲ್ಲಿ ತನ್ವೀರ್ ಸೇಠ್ ಅವರು ಪಾಲ್ಗೊಳ್ಳಲಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಪಡೆದ ಫರಾನ್ ಅಲ್ಲಿಗೆ ಒಬ್ಬಂಟಿಯಾಗಿ ಬಂದಿರಲಿಲ್ಲ. ಬದಲಿಗೆ ಕಾರಿನಲ್ಲಿ ಗೆಳೆಯರನ್ನೂ ಕರೆತಂದಿದ್ದ. ಕೃತ್ಯ ಮುಗಿಸಿದ ತಕ್ಷಣ ಕಾರಿನಲ್ಲಿ ಪರಾರಿಯಾಗಲು ಪಕ್ಕಾ ಪ್ಲಾನ್ ಸಿದ್ಧವಾಗಿತ್ತು. ತನ್ವೀರ್‌ಗೆ ಇರಿದು ಓಡುವ ಪ್ರಯತ್ನದಲ್ಲಿ ಮ್ಯಾಟ್‌ಗೆ ಸಿಲುಕಿ ಎಡವಿ ಬಿದ್ದಿದ್ದಾನೆ. ಆದರೆ, ಹೊರಗೆ ಈತನಿಗಾಗಿ ಕಾರಿನಲ್ಲಿ ಕಾಯುತ್ತಿದ್ದವರು ಪರಾರಿಯಾಗಿದ್ದಾರೆ. ಆರೋಪಿ ಫರಾನ್ ನೊಂದಿಗೆ ಇನ್ನೂ ಕೆಲವರು ಭಾಗಿಯಾಗಿರುವ ಮಾಹಿತಿ ಲಭ್ಯವಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸದ್ಯವೇ ಗಣ್ಯ ವ್ಯಕ್ತಿಯೊಬ್ಬರನ್ನು ಮುಗಿಸಿ, ಹೆಸರು ಮಾಡುವೆ...ನೋಡ್ತಾ ಇರ್ರಿ! ಹೀಗೆಂದು ಫರಾನ್ ತನ್ನ ಗೆಳೆಯರ ಬಳಿ ಕೊಚ್ಚಿಕೊಂಡಿದ್ದ ಎನ್ನಲಾಗಿದೆ.

## ನಮ್ಮವನಲ್ಲ

ಶಾಸಕ ತನ್ವೀರ್ ಸೇಠ್ ಅವರ ಮೇಲಿನ ಹಲ್ಲೆ ಖಂಡನಾರ್ಹ. ಕೊಲೆಗೆ ಯತ್ನಿಸಿರುವ ಯುವಕ ಫರಾನ್ ನಮ್ಮ ಪಕ್ಷದ ಕಾರ್ಯಕರ್ತನಲ್ಲ. ಎಲ್ಲ ಪಕ್ಷದಲ್ಲೂ ಕೆಲಸ ಮಾಡಿದ್ದಾನೆ. ತನ್ವೀರ್ ಸೇಠ್ ಅವರ ಜತೆಯೂ ಸಹ ಫೋಟೋ ತೆಗೆಸಿಕೊಂಡಿದ್ದಾನೆ ಎಂದು ಎಸ್‌ಡಿಪಿಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಎಚ್. ಅಬ್ದುಲ್ ಮಜೀದ್ ಸ್ಪಷ್ಟಪಡಿಸಿದ್ದಾರೆ.